ಪ್ಲೇಗು ನೋಟೀಸು.

ತಾರೀಖು 10ನೆ ಆಗಸ್ಟು 1904.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಹಾಸನ ತಾಲ್ಲೂಕು ಗೊರೂರು ಇನ್‌ಸ್ಪೆಕ್ಷನ್ ಲಾಡ್ಜ್ ಪ್ಲೇಗು ರೋಗದಿಂದ ಇನ್‌ಫೆಕ್ಟೆಡ್ ಪ್ಲೇಸ್ ಆಗಿಯು ಮತ್ತು ದುಸರಾ ನೋಟೀಸು ಕೊಡುವ ವರಿಗೂ ಇಳಿದುಕೊಳ್ಳುವದಕ್ಕೆ ಅರ್ಜವಾದ್ದಲ್ಲವಾಗಿಯು ಇದೆ.

ಸಿ. ಎ. ಮಹದೇವ ಶಾಸ್ತ್ರಿ,
ಎಗ್ಸಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ.

ಬ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟಿಕ್ಸ್‌ಟ್ ಗದ್ಯಭಾಗವು ಈಗ ಮಾರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿದೆ. ಖರೀದಿ ಪ್ರತಿ ಒಂದಕ್ಕೆ ಆಣೆ $2\frac{1}{2}$ (ಎರಡುವರಾಣೆಗಳು)

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್-ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ ಕಸಬಾ ಅತ್ತಿಬೆಲೆಯಲ್ಲಿ ಇರುವ ಮಲಗೂರೈಯ್ಯನ ಚನ್ನಪ್ಪನ ಮಗ ದೊಡ್ಡ ತಮ್ಮಣ್ಣನಾದ ನಾನು ಈಗ್ಗೆ ಸುಮಾರು 18 ದಿವಸದ ಕೆಳಗೆ ಬೆಂಗಳೂರಿಂದ ಅತ್ತಿಬೆಲೆಗೆ ಹೋಗುತ್ತಿರುವಾಗ್ಯೆ ದಾರಿಯಲ್ಲಿ ಮಳೆ ಬಂದದ್ದರಿಂದ ಓಡಿಹೋಗುತ್ತಿರುವಲ್ಲಿ, ನನ್ನ ಜೇಬಿನಲ್ಲಿದ್ದ, ನನಿಗೂ ಮತ್ತು ನನ್ನ ತಮ್ಮ ಚಿಕ್ಕ ತಮ್ಮಣ್ಣನಿಗೂ ಸಹಾ ಹುಟ್ಟಿರುವ ರಿಜಸ್ಟ್ರಾದ ವಾರೀಕತ್ತು ಮತ್ತು ಅತ್ತಿಬೆಲೆಯಲ್ಲಿರುವ ದಫೇದಾರ್ ರಾಮನಾಯಿಕನ ಮಗ ಮುನಿಕೃಷ್ಣಪ್ಪ ನೆಂಬುವನು ಪವತಿ ನನ್ನ ತಂದೆ ಚನ್ನಪ್ಪನಿಗೆ ಬರದುಕೊಟ್ಟಿರುವ ರಿಜಸ್ಟರಾದ 96ನೆ ಇಸವಿ ಮೇ 25ನೆ ತಾರೀಖಿನ ಆಧಾರದ ಪತ್ರ ಸಹಾ ಬಿದ್ದುಹೋಗಿದೆಯಾಗಿ ಯಾರಲ್ಲಿ ಆದರೂ ಸದರಿ ಪತ್ರಗಳು ದೊರಿಕಿಯಿದ್ದರೆ ನನಿಗೆ ತಿಳಿಸಿದರೆ ಬಹುಮಾನ ಕೊಟ್ಟು ಪತ್ರಗಳನ್ನ ಪಡದುಕೊಳ್ಳುತ್ತೇನೆ.

† ಈ ಗುರ್ತು ದೊಡ್ಡ ತಮ್ಮಣ್ಣನು ಹಾಕಿದ ರುಜುವಿಗೆ ಮಂಚನಹಳ್ಳಿ ತಿಪ್ಪಯ್ಯನ ಬರಹ.

Mysore Government Central Press, Bangalore.—1904.